[Reprint from *Karnataka Granthamala.*]

GOLDSMITH'S

# THE HERMIT

*(IN KANNADA VERSE)*

# ಪ್ರೋಷಿತ್
# ಪ್ರಿಯಸಮಾಗಮ

BY

S. G. NARASIMHACHAR

MYSORE

THE G.T.A. PRESS

1911

**EXTRACTED FROM THE BOOK**

## ಎಸ್. ಜಿ. ನರಸಿಂಹಾಚಾರ್ಯರ ಕವಿತೆಗಳು

(ಕವಿಚರಿತ್ರೆ, ಟಿಪ್ಪಣಿಗಳು, ಅನುಬಂಧಗಳೊಂದಿಗೆ)

ಸಂಪಾದಕ

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

**1986**

# ಕಥಾಂಶ.

---

ಒಬ್ಬ ಧನಿಕನಿಗೆ ಒಬ್ಬಳೇ ಮಗಳಿದ್ದಳು. ಆಕೆಗೂ ಮತ್ತೊಬ್ಬ ತರುಣನಿಗೂ ಪರಸ್ಪರಾನುರಾಗವು ಉಂಟಾಗಿದ್ದಿತು. ಆದರೂ ಆಕೆಯು ಧನಮದದಿಂದಲೋ ಅಥವಾ ಸ್ತ್ರೀಜನ ಸಹಜವಾದ ಚಾಂಚಲ್ಯದಿಂದಲೋ ಆತನನ್ನು ಧಿಕ್ಕರಿಸಿದಳು. ಆತನು ಮನೋವ್ಯಥೆಯಿಂದ ವನಪ್ರವೇಶಮಾಡಿ ಋಷಿಚರ್ಯೆಯಲ್ಲಿ ಇರುತ್ತಿದ್ದನು. ಬಳಿಕ ಆಕೆಗೆ ಪಶ್ಚಾತ್ತಾಪವುಂಟಾಗಿ ಆತನನ್ನು ವರಿಸಬೇಕೆಂದು ಎಲ್ಲೆಲ್ಲಿ ಹುಡುಕಿದರೂ ಕಾಣದೆ ಪುರುಷವೇಷವನ್ನವಲಂಬಿಸಿ ಅರಣ್ಯದಲ್ಲಿ ಹುಡುಕುತ್ತಾ ಇರುವಲ್ಲಿ, ಒಂದು ದಿವಸ ಸಂಧ್ಯಾಕಾಲದಲ್ಲಿ ಈ ವಿರಹಿಗಳಿಬ್ಬರೂ ಸಂಧಿಸಿದರು. ವೇಷಾಂತರದಲ್ಲಿದ್ದ ಕಾರಣದಿಂದ ಇಬ್ಬರಿಗೂ ಗುರುತು ತಿಳಿಯಲಿಲ್ಲ. ಆ ಕಾಲದಲ್ಲಿ ಆಕೆಯು ಆತನನ್ನು ನೋಡಿ ಇಂತೆಂದಳು :—

# ಪ್ರವೇಶ

---

ಕರ್ಣಾಟಕ ಕವಿಯೆಂದು ಪ್ರಸಿದ್ಧವಡೆದ ಎಸ್. ಜಿ. ನರಸಿಂಹಾಚಾರ್ಯರಿಂದ ರಚಿತವಾದ ಈ ಸಣ್ಣ ಕಾವ್ಯವು ಗೋಲ್ಡ್ ಸ್ಮಿತ್ ಎಂಬ ಹೂಣಕವಿಶ್ರೇಷ್ಠನ ದಿ. ಹರ್ಮಿಟ್ ಎಂಬುದರ ಪದ್ಯಾನುವಾದವು. ಇದೊಂದು ಶೃಂಗಾರರಸ ಪ್ರಧಾನವಾದ ರಮಣೀಯವಾದ ಕಾವ್ಯವು.

# ಪ್ರೋಷಿತ ಪ್ರಿಯಸಮಾಗಮಂ

ಕರುಣಾಳೊ ವನವಾಸೀ
ತಿರುಗೈ ಯಮಿಂ ತಿರಿವೆನೊರ್ವನೆನ್ನಂ ಕೊಂಡಾ
ಕಿರಣದೆ ಬನಮಂ ಬೆಳಗುತೆ
ಪರಹಿತಕೆನೆ ಮಿರುಪ ಸೊಡರ ಬಳಿಗೊಡವೋಗೈ ೧

ಆರುಮೊಡನಿಲ್ಲವಕ್ಕಟ
ದಾರಿಯನರಿಯೆಂ ಬಳಲ್ದು ಮೆಲ್ಲನದೆನಿತಂ
ದೂರಮನೈದುವೆನನಿತುಮ
ಪಾರಮೆನಿಪ್ಪಡವಿ ಬಳಿವ ತೆರದಿಂ ತೋರ್ಕುಂ ೨

ಎನೆ ಮುನಿ ನುಡಿಗುಂ ಮಾಣೆಲೆ
ತನಯಾ ಕಳ್ತಲೆಯಪಾಯಕರಮೈದದಿರ್ಕೈ
ಮಿನುಗುವ ಟಿಕ್ಕಿನ ಸೊಡರದು
ಕೊನೆಗಾಣಿಸಲೆಂದು ನಿನ್ನನಿಂತೆಳೆದೊಯ್ಗುಂ ೩

ಮನೆಯಿಲ್ಲದಲೆವ ಜನಕದೆ
ಮನೆಯದರ ಕವಾಟಮಾಗಳುಂ ತೆರೆದಿರ್ಕುಂ
ಎನಗಿರ್ಪ ವಸ್ತು ಕಡುಕಿರಿ
ದೆನಿಸಿದೊಡಂ ಪ್ರೀತಿಯಿಂದಮಾನದನೀವೆಂ ೪

ಆದರಿಂದೆ ತಿರುಗು, ರಾತ್ರಿಯ
ನದರೊಳ್ಕಳೆ ನನ್ನ ಕುಟಿಯೊಳಿರ್ಪುದನೆನ್ನೊಳ್
ಪುದುವನೆ ಕೊಳ್ ಪಣ್ಣುಣಿಸಂ
ಮೊದೆವಾಸಂ ನಿದ್ರೆಯಂ ಮದೀಯಾಶಿಷಮಂ ೫

ಮನವೊಸೆದಂತಿರೆ ತಪ್ಪಲ
ಬನದೊಳ್ಸಂಚರಿಪ ಮೃಗಮನೆಂದುಂ ಕೊಲ್ಲೆಂ
ಎನಗೆ ದಯೆದೋರ್ಪ ಜಗದೀ
ಶನೊಳಾಂ ಕಲ್ತವರೊಳಿಂತು ಕರುಣಮನಾಂಪೆಂ ೬

ಗಿರಿತಟವನದಿಂ ತರ್ಪೆಂ
ಪರಿಪೂತಂ ಪಾಪದೂರಮೆನಿಪೊಳ್ಪುಣಿಸಂ
ಪರಿಪಕ್ವಫಲದೆ ಕಂದದೆ
ತುರುಗಿದ ಕರಡಿಗೆಯನಮಳಜಲಮಂ ಝರದಿಂ ೭

ತಿರುಗದರಿಂದಲೆ ಚಿತ್ತದ
ಮರುಕಮನುಳಿಯಿಹದ ಚಿಂತೆಯೇ ದೋಷಕರಂ
ನರನಿಲ್ಲಿ ಬಯಸುವುದೆ ಕಡು
ಕಿರಿದಾ ಕಿರಿದುಮನನಲ್ಪಕಾಲಂ ಬಯಸಂ ೮

ಎನೆ ನುಡಿದ ಮುನಿಯ ನುಡಿ ಮಂ
ಜಿನ ಪನಿ ಪನಿವಂತೆ ಮೆಲ್ಲನೊಳವುಗೆ ಕಿವಿಯಂ
ವಿನಮಿತಶಿರನಾ ಪಾಂಥಂ
ಮುನಿಪನ ಬೆಂಬಳಿಯೊಳವನ ಕುಟಿಗೊಡವೋದಂ ೯

ದೂರದೊಳಾರುಂ ಕಾಣದ
ಹೇರಡವಿಯೊಳಿರ್ಕುವೊಂದೆ ಕುಟಿಯದು ನೆರೆಯಾ
ಊರ ಬಡವರ್ಗೆ ಗೇಹಂ
ದಾರಿಯನರಿಯದೆ ತೊಳಲ್ವ ಪಥಿಕರ ಶರಣಂ ೧೦

ಕಳದಂತೆ ಕಾಪಿಡಲ್ತ
ನ್ನೊಳಗೊಂದುಂ ವಸ್ತುವಿಲ್ಲವೆನಿಪಾ ಕುಟಿಯಂ
ತೊಲಗಿಸಿ ಬಾಗಿಲ್ದಟ್ಟಿಯ
ನೊಳಪೊಕ್ಕರ್ ಸಾಧುವೃತ್ತರಿರ್ವರುಮಾಗಳ್ ೧೧

ಕೆಲಸಂಗಳನುಳಿದು ಜನಂ
ನಿಲಯಕೆ ವಿಶ್ರಾಂತಿಗೆಂದು ಬರ್ಪಿರುಳೊಳವಂ
ಜ್ವಲಿಯಿಸುತೆ ಹಸಂತಿಕೆಯಂ
ನಲವಡಿಸಿದನತಿಥಿಯಂ ವಿಷಣ್ಣನನಾಗಳ್ ೧.

ಪಳಮನುಣಲಿಕ್ಕಿದಂ ನಗೆ
ಕೆಳೆಗೊಳೆ ಸವಿನೋಡೆನುತ್ತುಮಡಿಗಡಿಗೊರೆದಂ
ಪಳೆಯ ಕತೆಗಳನೆ ಪೇಳಂತೆ
ಕೆಳೆದಂ ನಿಡುಪ್ಪೊಳ್ತ್ತನಾ ಕಥಾಗಮನಿಪುಣಂ ೧ .

ನಲವಂ ತಾನುಂ ತಳೆದಂ
ತೆಳವೆಕ್ಕೆಸಗುಗುಮನೇಕ ವಿಧಚೇಷ್ಟೆಗಳಂ
ಉಲಿಗುಂ ಝಿಲ್ಲಿಗಳೊಲೆಯೊಳ್
ಜ್ವಲಿಕುಂ ಚಟಚಟನೆ ಪುಳ್ಳಿಗಳಾರ್ಬುತ್ತುಂ ೧೪

ಇನಿತರೊಳೊಂದುಂ ಪಾಂಥನ
ಮನದಳಲಂ ಕಳೆದು ನಲವನೆಸಗಿದುದಿಲ್ಲಂ
ಘನಶೋಕಭರದೊಳಾತನ
ಕೊನೆಗಣ್ಣಿಂದಶ್ರುಧಾರೆ ಸುರಿದತ್ತಾಗಳ್ ೧೫

ಅಂತುರ್ಬುವಳಲನೀಕ್ಷಿಸಿ
ಚಿಂತಿಸಿ ಬಗೆಗರಗಿ ಮುನಿಪನವನಂ ಕೇಳ್ಗುಂ
ಎಂತೆಲೆ ಚಿಂತಾಕುಲ ನಿನ
ಗೆಂತೆತ್ತಣಿನಾಯ್ತು ಬಗೆಯೊಳಿನಿತುಂ ದುಗುಡಂ ? ೧೬

ಕರುಮಾಡದಿಂದೆ ತೊಲಗಿಸೆ
ಮರುಕದೆ ಬಗೆಗೊಳ್ಳದಿಲ್ಲಿ ತಿರಿವೆಯೊ ಮಿತ್ರರ್
ನೆರೆ ವಿಮುಖರಾಗಲಳ್ವೆಯೊ
ತರುಣೀಜನವೊಲಿಯದಿರ್ದೊಡೇಂ ಶೋಕಿಪೆಯೋ ? ೧೭

ಸಿರಿಗಳ್ವೆಯಪ್ಪೊಡಕ್ಕಟ
ಸಿರಿಯಿಂ ದೊರೆಕೊಳ್ವ ಸೌಖ್ಯಮಲ್ಪಂ ಕ್ಷಯಿಕಂ
ದೊರೆಕೊಳ್ವೀಯಲ್ಪಮುಮಂ
ಪಿರಿದೆಂದೆನೆ ಬಗೆವರಲ್ಪತರರದರಿಂದಂ ೧೮

ಪರಿಕಿಸೆ ಕೆಳೆತನಮಾವುದೊ
ಪುರುಳಿಲ್ಲದ ಮಾತು ಮರವೆಗೊಳಿಪ ಕುಮಂತ್ರಂ
ಸಿರಿಯುಂ ಜಸಮುಂ ಬಿಡದನು
ಸರಿಪ ನೆಳಲ್ ಶೋಕಬೀಜಮುಡುಗಿದ ಪದದೊಳ್ ೧೯

ಒಲವುಂ ಬರಿನುಡಿ ಕೆಳೆಯಿಂ
ದೆ ಲಘುತರಂ ಸತಿಯರೀಗಡಿನ ಪರಿಹಾಸಂ
ನೆಲದೊಳದೆತ್ತಂ ದೊರೆಯದು
ಪಲವೇಂ ? ದೊರೆದಂದು ದೊರೆಗುಮೆಣೆವಕ್ಕಿಗಳೊಳ್ ೨೦

ಎಲೆ ಮರುಳೆ ಲಜ್ಜೆಯಾಗದೊ
ತೊಲಗಿಸು ನಿನ್ನಳಲನೊದೆದು ಕಳೆ ಪೆಂಡಿರನೆಂ
ದುಲಿಯೆ ಮುನಿ ಪಥಿಕವದನದೆ
ತಲೆದೋರಿದ ಕೆಂಪು ವಿರಹಮಂ ಸೂಚಿಸುಗುಂ ೨೧

ಪಿರಿದುಂ ವಿಸ್ಮಯದಿಂ ಮುನಿ
ನಿರುಕಿಸಿದಂ ನವನವೋನ್ಮಿಷತ್ಸುಭಗತೆಯಂ
ಅರುಣೋದಯದಾಕಾಶದ
ಸಿರಿವೊಲ್ಪೊಳೆದಪುದನಂತೆ ಮೆಯ್ಗರೆದಪುದಂ ೨೨

ಮುರಿದಿಟ್ಟಿಯೊರ್ವ್ವೆ ಮೇಣು
ಬ್ಬರಿಪೆರ್ದೆಯುಮಂದೊರ್ಕೆ ಮನದ ಭಯಮಂ ತಾಂ ಬಿ
ತ್ತರಿಸೆ ಸೊಬಗಾಂತ ಪಾಂಥಂ
ತರುಣಿಯ ಕಡುಚೆಲ್ವುವೆತ್ತ ರೂಪಂ ಮೆರೆಗುಂ ೨೩

ಒಳಿಕೊರೆಗುಂ ಕ್ಷಮಿಸೈ ಧೃ
ಷ್ಟಳನಶರಣೆಯುಂ ಜಗತ್ಪಿತಂಗಂ ನಿನಗಂ
ನಿಳೆಯುಮೆನಿಪ್ಪೀಯಾಶ್ರಮ
ದೊಳವೊಕ್ಕನುವಳಿಯಲಿಂತು ಪೊಲೆಗಲಸಿದಳಂ ೨೪

ಕರುಣಿಂದಳೆ ಕನ್ಯಕೆಯೊಳ್
ಪಿರಿದಪ್ಪನುರಾಗದಿಂ ತೊಳಲ್ವಳೊಳೆತ್ತಂ
ಅರಸಿದೊಡಂ ಸುಖವೊಂದದೆ
ನಿರಾಶೆಯೊಳ್ಕೂಡಿ ಬಟ್ಟೆನಡೆವಳೊಳೆನ್ನೊಳ್ ೨೫

ಸಿಂಧುವ ತೀರದೊಳೆಮ್ಮಯ
ತಂದೆವಿರಿರ್ದರ್ ಮಹಾಧನಾಢ್ಯರ್ ಪ್ರಭುಗಳ್
ತಂದೆಗಳ ಬಸಿರೊಳೊರ್ವಳೆ
ಬಂದುದರಿಂದೆನ್ನದಾದುದಾ ಸಿರಿಯನಿತುಂ ೨೬

ನಡೆಪಿದ ತಂದೆಯಿನೆನ್ನಂ
ಪಡೆಯಲ್ವೆಂದರ್ ಪಲಂಬರವರೊಳ್ಕೆಲರಾಂ
ಪಡೆಯದ ಚೆಲ್ವಂ ಪೊಗಳ್ದರ್
ಪಿಡಿದೊಲ್ದರ್ ಪಲವರರೆಬರೊಲ್ದುವೊಲಿರ್ದರ್ ೨೭

ಪಿರಿದುಂ ಧನಮಿತ್ತೆನ್ನಂ
ವರಿಸಲ್ಕೆನೆ ಗಳಿಗೆಗೊರ್ವರ್ಬೈದಿದರವರೊಳ್
ತರುಣಂ ಬಕರ್ಮದೊರ್ವಂ
ಶಿರಮಂ ಬಾಗಿಸುಗುಮೊಲ್ದುಮೆರೆಯದೆ ನಿಲ್ಕುಂ ೨೮

ಸಿರಿಯುಂ ಪ್ರಭುತೆಯುಮಿಲ್ಲದೆ
ಬರಿದಂ ಬೆಳ್ಕುಡೆಯನಾಂತನಾದೊಡಮವನೊಳ್
ನೆರೆದತ್ತರಿವುಂ ತಕ್ಕುಮ
ವೆರಡಂ ಸರ್ವಸ್ವಮೆಂದು ನಾಂ ಬಗೆದಿರ್ದೆಂ ೨೯

ಉಪವನದೆಡೆಗಳೊಳವನೆ
ನ್ನ ಪಕ್ಕದೊಳಗೊಲ್ದುವಾಡುಪಾಡುವ ಪದದೊಳ್
ಉಪವನದೆಲರಾತನ ಸು
ಯ್ಯ ಪರಿಮಳಂಬಡೆಗುಮಡವಿ ನುಣ್ಗೊರಲಿಂಪಂ ೩೦

ರವಿಯುದಯದಲರ್ವ ಸುಮಮುಂ
ಪ್ರವಿಮಳವೆನೆ ಗಗನದಿಂದೆ ಸೂಸುವ ಹಿಮಮುಂ
ಆವನ ಹೃದಯಕ್ಕೆ ದೊರೆಯೆನಿ
ಸುವನಿತು ವಿಮಲತೆಯನೆಂದುಮೇಂ ತೋರುಗುಮೇ ೩೧

ಹಿಮಮುಂ ತರುವ್ವೊಳ್ ವಿಕಸಿಪ
ಸುಮಮುಂ ಚಿರಶೋಭಿಯಾಗವವರಂತವನೊಳ್
ಸುಮನಿಸಿದುದು ಸೊಬಗೆನ್ನೊಳ್
ಸಮನಿಸಿತವರೊಂದು ಚಂಚಲತೆಯೆಂಬ ಗುಣಂ ೩೨

ಅರಿದುಮಿವಂ ಕಣ್ಸೋಲ್ತುದ
ನುರುಂಗರ್ವದೆ ಬೀಗಿಯಕಟ ಪಲವುಂ ಪರಿಯಿಂ
ಮರುಗಿಸಿದೆಂ ಮೇಣಾತನ
ಮರುಕದೊಳಿರ್ದೆಗರಗದೈದೆ ನೆಲವಾಂತಿರ್ದೆಂ ೩೩ .

ಕಡುನೊಂದು ತನ್ನ ಗರ್ವದ
ಬಿಡುನುಡಿಯಿಂ ತೊರೆದು ನನ್ನನವನೊರ್ವನೆ ಕಾ
ಡೆಡೆಗೆ ನಡೆದಾರುಮಡಿಯಿಡೆ
ದೆಡೆಯೊಳ್ತನ್ನೊಡಲನಕಟ ನೀಗಿದನಕ್ಕುಂ ೩೪

ಎನತೆ ಅಳಲೆನತೆ ದೋಷಂ
ತನುವಿರ್ಪಿನಮಿದರ ಕೈಪೆಯುಂ ನಾನುಣ್ಬೆಂ
ಮನದಿನಿಯನೊಡಲ ನೀಗಿದ
ವನದೆಡೆಯಂ ಪೊರ್ದಿ ನೀಗಿದಪೆನೀ ತನುವಂ ೩೫

ಪರಿಜನಮನುಳಿದುಮಳಿಪಂ
ತೊರೆದುಂ ಪೈಗರೆದುಮಲ್ಲಿ ನೀಗುವೆನೊಡಲಂ
ಪೆರತೇಂ ಮದರ್ಥಮವನಂ
ತಿರೆಗೈವಂ ನಾಂ ತದರ್ಥಮಂತುಟೆ ಗೈವೆಂ ೩೬

ಅಂತಾಗದಿರ್ಕೆನುತ್ತುಂ
ಕಾಂತೆಯ ನುಣ್ಗೊರಲನಪ್ಪಿದಂ ಮುನಿ ಸತಿಯುಂ
ಅಂತನುಚಿತಮಂ ಗೈದವ
ನಂ ಶಿಟ್ಟಿಲ್ ತಿರುಗಿ ಕಂಡಳಿನಿಯನನವನಂ ೩೭

ತಿರುಗು ಮನಃಪ್ರಿಯೆ ಮನ್ನೀ
ತ್ರರಸಾಯನೆ ನಿರುಕಿಸೆಲಗೆ ನಿನ್ನವನಂ ಮುಂ
ಪಿರಿದಿರ್ದನನಿನ್ನೆವರಂ
ಮರಳ್ದುಂ ನಿನ್ನೊಲ್ಮೆಗಿಂದು ಸಂದನನೆನ್ನಂ ೩೮

ಎನ್ನಯ ಸರ್ವಸ್ವಮೆ ಎಲೆ
ಎನ್ನಯ ಜೀವಿತಮೆ ಪಿರಿಯದೆಂದುಂ ನಿಲ್ವಂ
ತೆನ್ನೆರ್ದೆಯೊಳ್ ತಳ್ಕೈಸುತೆ
ನಿನ್ನಂ ನಾಂ ದುಃಖಮೆಲ್ಲಮಂ ಮರೆದಪ್ಪೆಂ ೩೯

ಇನ್ನೀ ಗಳಿಗೆಯೆ ಮೊದಲೆನೆ
ಮುನ್ನೆಂದುಂ ಪಿರಿಯದೊಲ್ದು ನಾವೊಡವಾಳ್ವಂ
ನಿನ್ನೆರ್ದೆಯನೊಡೆವ ಸುಯ್ಗಳ್
ನಿನ್ನಯ ಮನದನ್ನನೆರ್ದೆಯುಮಂ ಭೇದಿಸುಗುಂ ೪೦

ಇಂತಿರಲಾ ಗೋಲ್ಡ್‌ಸ್ಮಿತ್ ಕವಿ
ಮುಂತೊರೆದಿರ್ದೊಂದು ಕಿರಿಯ ಕೃತಿಗಿದು ನೆಳಲೆಂ
ಬಂತಿರೆ ರಚಿಸಿದೆನೀ ಕೃತಿ
ಸಂತಸಮಂ ಕುಡುವುದಕ್ಕೆ ಕನ್ನಡಿಗರ್ಗಂ ೪೦